**ಸಾಕ್ಷಿಗೆ ದಿನಾಂಕ 21-09-2024 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಂದುವರೆದ ಮುಖ್ಯ ವಿಚಾರಣೆ ಶ್ರೀ ಬಿ.ಎಂ.ಎಂ. ಅರ್ಜಿದಾರರ ಪರ ವಕೀಲರಿಂದ</u>**

ನಮ್ಮ ವಕೀಲರು KBJNL ಕಚೇರಿಗೆ ನೀಡಿದ ಅರ್ಜಿಯ ಸ್ವೀಕೃತಿಯನ್ನು ಹಾಜರುಪಡಿಸಿದ್ದು ಅದನ್ನು 11 ಎಂದು ಗುರುತಿಸಲಾಯಿತು.

ಸ.ನಂ. 26, 18 / ಇ ಜಮೀನಿಗೆ ಸಂಬಂಧಿಸಿದ 3 ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಅನುಕ್ರಮವಾಗಿ ನಿಪಿ-12 ರಿಂದ 14 ಎಂದು ಗುರುತಿಸಲಾಯಿತು.

APMC ಕಲ್ಬುರ್ಗಿಯವರು ನೀಡಿದ ವಿವಿಧ ಬೆಳೆಗಳ ಬೆಲೆಯ ಧಾರಣೆ ಪತ್ರದ ಮಾಹಿತಿಯನ್ನು ಹಾಜರುಪಡಿಸಿದ್ದು ಅದನ್ನು 15 ಎಂದು ಗುರುತಿಸಲಾಯಿತು.

APMC ಬಿಜಾಪೂರರವರು ನೀಡಿದ ವಿವಿಧ ಬೆಳೆಗಳ ಬೆಲೆಯ ಧಾರಣೆ ಪತ್ರದ ಮಾಹಿತಿಯನ್ನು ಹಾಜರುಪಡಿಸಿದ್ದು ಅದನ್ನು 16 ಎಂದು ಗುರುತಿಸಲಾಯಿತು.

LAC ಅಪೀಲು 258/2018ರಲ್ಲಿ ಆದಂತಹ ತೀರ್ಪು ಮತ್ತು ಡಿಕ್ರಿಯ ದೃಢೀಕೃತ ನಕಲು ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಅನುಕ್ರಮವಾಗಿ ನಿಪಿ-17 ರಿಂದ 18 ಎಂದು ಗುರುತಿಸಲಾಯಿತು.

LAC ಅಪೀಲು 387/2017, 389/2017 ರಲ್ಲಿ ಆದಂತಹ ತೀರ್ಪಿನ ದೃಢೀಕೃತ ನಕಲು ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-19 ಎಂದು ಗುರುತಿಸಲಾಯಿತು.

LAC ಪ್ರಕರಣ ನಂ.2/2019ರಲ್ಲಿ ಸಲ್ಲಿಸಿದ ಕಲಂ 18(1) ರಅಡಿಯಲ್ಲಿ ಸಲ್ಲಿಸಿದ ಅರ್ಜಿಯ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-20 ಎಂದು ಗುರುತಿಸಲಾಯಿತು.

LAC ಪ್ರಕರಣ ನಂ.4/2019ರಲ್ಲಿ ಸಲ್ಲಿಸಿದ ಕಲಂ 18(1) ರಅಡಿಯಲ್ಲಿ ಸಲ್ಲಿಸಿದ ಅರ್ಜಿಯ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-21 ಎಂದು ಗುರುತಿಸಲಾಯಿತು.

LAC ಪ್ರಕರಣ ನಂ.5/2019ರಲ್ಲಿ ಸಲ್ಲಿಸಿದ ಕಲಂ 18(1) ರಅಡಿಯಲ್ಲಿ ಸಲ್ಲಿಸಿದ ಅರ್ಜಿಯ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-22 ಎಂದು ಗುರುತಿಸಲಾಯಿತು.

LAC ಪ್ರಕರಣ ನಂ.6/2019ರಲ್ಲಿ ಸಲ್ಲಿಸಿದ ಕಲಂ 18(1) ರಅಡಿಯಲ್ಲಿ ಸಲ್ಲಿಸಿದ ಅರ್ಜಿಯ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-23 ಎಂದು ಗುರುತಿಸಲಾಯಿತು.

**<u>ಪಾಟೀಸವಾಲುಃ ಶ್ರೀ ಆರ್.ಟಿ.ಕೆ. 1ನೇ ಎದುರುದಾರರ ಪರ ವಕೀಲರಿಂದ</u>**

ನಾನು SSLC ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಸಿದ್ದಪ್ಪ, ಹಣಮಂತ, ನಿಂಗಪ್ಪ ತಂದೆ ಸಾಯಬಣ್ಣ ಮತ್ತು ನಿಂಗಪ್ಪರವರ ಜಮೀನುಗಳ ಬಗ್ಗೆ ನಮಗೆ ಮಾಹಿತಿ ಇದೆ. ನಿಂಗಪ್ಪ ತಂದೆ ಸಾಯಬಣ್ಣರವರ ಜಮೀನು ಸ.ನಂ.11 ಆಗಿದೆ. ಸಿದ್ದಪ್ಪಣರವರ ಜಮೀನು ಸ.ನಂ.16 ಆಗಿದೆ. ಅವರ ಜಮೀನುಗಳು ವಿಸ್ತೀರ್ಣ ಗೊತ್ತಿಲ್ಲ. ಮತ್ತೊಬ್ಬ ನಿಂಗಪ್ಪ ಹಾಗೂ ಆತನ ವಾರಸುದಾರರ ಜಮೀನು 9 ಎಕರೆ ಚಿಲ್ಲರೆ ಗುಂಟೆ ಇದೆ.

ಭೂಸ್ವಾಧೀನಾಧಿಕಾರಿಗಳು ದಿನಾಂಕ 24-03-2011 ರಂದು ನಮ್ಮ ಜಮೀಗಳಿಗೆ ಭೇಟಿ ನೀಡಿ ಜಮೀನುಗಳನ್ನು ಪರಿಶೀಲನೆ ಮಾಡಲು ಬಂದಂತಹ ಸಮಯದಲ್ಲಿ ಗಿಡಮರ ಗಳು ಇಲ್ಲ ಎಂದು ವರದಿಯಲ್ಲಿ ನಮೂದಿಸಿರುತ್ತಾರೆಂದರೆ ಸಾಕ್ಷಿ ಸದರಿ ಭೂಸ್ವಾಧೀನಾಧಿಕಾರಿಗಳು ಜಮೀನಿಗೆ ಬಂದಾಗ ಮಳೆ ಬಂದಿದ್ದು ಅವರು ಜಮೀನುಗಳನ್ನು ಪರಿಶೀಲಿಸದೇ ಹಾಗೆಯೇ ಹೋಗಿರುತ್ತಾರೆಂದು ನುಡಿಯುತ್ತಾರೆ. ಭೂಸ್ವಾಧೀನಾಧಿಕಾರಿಗಳು ಮಳೆ ಬಂದಾಗ ಹಾಗೆಯೇ ಹೋಗಿರುತ್ತಾರೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಭೂಸ್ವಾಧೀನಾಧಿಕಾರಿಗಳು ಜಮೀನಿಗೆ ಬಂದು ಜಮೀನುಗಳನ್ನು ಪರಿಶೀಲನೆ ಮಾಡಿದ ನಂತರ ಖುಷ್ಕಿ ಜಮೀನು ಅಂತಾ ಅಭಿಪ್ರಾಯಕ್ಕೆ ಬಂದಿರುತ್ತಾರೆಂದರೆ ಸಾಕ್ಷಿ ಭೂಸ್ವಾಧೀನಾಧಿಕಾರಿಗಳು ಜಮೀನಿಗೆ ಬಂದಿಲ್ಲ ಎಂದು ನುಡಿಯುತ್ತಾರೆ. ಭೂಸ್ವಾಧೀನಾಧಿಕಾರಿಗಳು ನಮ್ಮ ಜಮೀನುಗಳನ್ನು ಸರಿಯಾಗಿ ಪರಿಶೀಲಿಸಿ ಯೋಗ್ಯವಾದಂತಹ ಪರಿಹಾರ ಧನ ಘೋಷಿಸಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ಜಮೀನಿನ ಬೆಲೆ ಪ್ರತಿ ಎಕರೆಗೆ 12 ಲಕ್ಷ ಆಗುತ್ತಿದ್ದು ಭೂಸ್ವಾಧೀನಾಧಿಕಾರಿಗಳು ಪ್ರತಿ ಎಕರೆಗೆ 28 ಸಾವಿರ ದರ ನಿಗದಿಪಡಿಸಿರುತ್ತಾರೆಂದು ನುಡಿಯುತ್ತಾರೆ.

ನಾವು ಕಲಂ 18 ರಲ್ಲಿ ಸಲ್ಲಿಸಿದ ಅರ್ಜಿ ಕಾಲಮಿತಿಯಲ್ಲಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ಜಮೀನು ಪ್ರತಿ ಎಕರೆಗೆ 12 ಲಕ್ಷ ಬೆಲೆ ಬಾಳುತ್ತಿತ್ತು ಅಂತಾ ಯಾವುದೇ ದಾಖಲೆಗೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ಜಮೀನು ಪ್ರತಿ ಎಕರೆಗೆ 12 ಲಕ್ಷ ಬೆಲೆ ಬಾಳುತ್ತಿತ್ತು ಅಂತಾ ತೋರಿಸಲು ನ್ಯಾಯಾಲಯದಲ್ಲಿ ಯಾವುದೇ ದಾಖಲೆ ಸಲ್ಲಿಸಿಲ್ಲ ಹಾಗೂ ಭೂಸ್ವಾಧೀನಾಧಿಕಾರಿಗಳಿಗೂ ಯಾವುದೇ ದಾಖಲೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

ನೀರಿನ ಪಂಪಿಗೆ ವಿದ್ಯುತ್ ಸಂಪರ್ಕ ಪಡೆದುಕೊಂಡಿರುವ ಬಗ್ಗೆ ದಾಖಲಾತಿಯನ್ನು ಸೃಷ್ಟಿಸಿಕೊಂಡು ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ. ಐತೀರ್ಪು ದಿನಾಂಕ 24-03-2011 ರಂದು ಆಗಿದ್ದು ನಿಪಿ-2 ರ ದಾಖಲೆಯನ್ನು ದಿನಾಂಕ 09-01-2019ರಂದು ನೀಡಿದ್ದಾರೆಂದರೆ ಸಾಕ್ಷಿ ಅದರ ಪೂರ್ವದಿಂದಲೂ ನಮ್ಮ ಜಮೀನು ನೀರಾವರಿ ಜಮೀನಾಗಿತ್ತು ಎಂದು ನುಡಿಯುತ್ತಾರೆ. ಹೆಚ್ಚಿಗೆ ಪರಿಹಾರ ಪಡೆಯಲು ಸುಳ್ಳು ದಾಖಲಾತಿಗಳನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ.

ಕಲ್ಬುರ್ಗಿಯಿಂದ ಬಿಜಾಪುರ ರಸ್ತೆ 140 ಕಿ.ಮೀ.ನಷ್ಟು ಅಂತರದಲ್ಲಿದೆ. ನಮ್ಮ ಗ್ರಾಮ ಸಿದ್ನಾಳದಿಂದ ಬಿಜಾಪೂರ ಗ್ರಾಮ 104 ಕಿ.ಮೀ.ನಷ್ಟು ದೂರ ಇದೆ. ಬಿಜಾಪೂರ APMC ಯವರು ನೀಡಿದ ದೃಢೀಕರಣ ಪತ್ರವನ್ನು ಸೃಷ್ಟಿಸಿಕೊಂಡು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ.

ಸಿದ್ನಾಳದಿಂದ ಅಫ್ಜಲಪೂರ ಗ್ರಾಮ 12 ಕಿ.ಮೀ.ನಷ್ಟು ದೂರ ಇದೆ. ನಿಪಿ-7ರ ತೋಟಗಾರಿಕಾ ಇಲಾಖೆಯವರು ನೀಡಿದ ದಾಖಲಾತಿಯನ್ನು ಸೃಷ್ಟಿಸಿಕೊಂಡು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ.

ನಮಗೆ ಸೇರಿದ 24 ಗುಂಟೆ ಜಮೀನು ಸರಕಾರದವರು ಸ್ವಾಧೀನಪಡಿಸಿಕೊಂಡಿರುತ್ತಾರೆ. ಸರಕಾರದವರು ಸ್ವಾಧೀನಪಡಿಸಿಕೊಂಡ ನನ್ನ 24 ಗುಂಟೆ ಜಮೀನಿನಲ್ಲಿ ಬಾಳೆಹಣ್ಣು, ಕಲ್ಲಂಗಡಿ, ಶೇಂಗಾ, ಅರಶಿನ, ಹತ್ತಿ, ಮೆಣಸಿನಕಾಯಿ, ಸೌತೆಕಾಯಿ, ತೊಗರಿ, ಹೆಸರು, ಜೋಳ, ಕುಂಬಳಕಾಯಿ, ಗೆಣಸು ಬೆಳೆಯುತ್ತಿದ್ದೆ ಅಂತಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಮಧ್ಯಾಹ್ನ 03-00 ಗಂಟೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ.

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,ಜೇವರ್ಗಿ

**ಸಾಕ್ಷಿಗೆ ದಿನಾಂಕ 21-09-2024 ರಂದು ಮಧ್ಯಾಹ್ನ 03-20 ಗಂಟೆಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಂದುವರೆದ ಪಾಟೀಸವಾಲುಃ ಶ್ರೀ ಆರ್.ಟಿ.ಕೆ. 1ನೇ ಎದುರುದಾರರ ಪರ ವಕೀಲರಿಂದ</u>**

ನಾನು ಹಾಜರುಪಡಿಸಿದ ಪಹಣಿ ಪತ್ರಿಕೆಯಲ್ಲಿ ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ನಮೂದಿಸಿದ ಬೆಳೆಗಳು ಇಲ್ಲ ಎಂದರೆ ಸಾಕ್ಷಿ ನಾವು ಜಮೀನಿನಲ್ಲಿ ಬೆಳೆಯುತ್ತಿದ್ದ ಬೆಳೆಗಳ ಬಗ್ಗೆ ಗ್ರಾಮ ಲೆಕ್ಕಾಧಿಕಾರಿಗಳಿಗೆ ಹೇಳಿದರೂ ಅವರು ನಮೂದಿಸಿರುವುದಿಲ್ಲ. ನಮ್ಮ ಜಮೀನಿನಲ್ಲಿ ಬೆಳೆಯುತ್ತಿದ್ದ ಬೆಳೆಗಳ ಬಗ್ಗೆ ಗ್ರಾಮ ಲೆಕ್ಕಾಧಿಕಾರಿಗಳಿಗೆ ಮೌಖಿಕವಾಗಿ ಹೇಳಿರುತ್ತೇನೆ. ಗ್ರಾಮ ಲೆಕ್ಕಾಧಿಕಾರಿಗಳಿಗೆ ಜಮೀನಿನಲ್ಲಿ ಬೆಳೆಯುವ ಬೆಳೆಗಳನ್ನು ಪಹಣಿಪತ್ರಿಕೆಯಲ್ಲಿ ನಮೂದು ಮಾಡಿ ಅಂತಾ ಮೌಖಿಕವಾಗಿ ಹೇಳಿದ್ದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿದಂತೆ ಗ್ರಾಮ ಲೆಕ್ಕಾಧಿಕಾರಿಗಳು ಹಾಗೂ ಭೂಸ್ವಾಧೀನ ಅಧಿಕಾರಿಗಳು ಜಮೀನಿಗೆ ಬಂದಿಲ್ಲ ಎಂದು ಹೇಳಿರುವ ವಿಚಾರ ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ.

ಅಫ್ಜಲಪೂರದಿಂದ ಅಳಗಿ ಗ್ರಾಮ ಸುಮಾರು 30 ಕಿ.ಮೀ. ದೂರ ಇದೆ ಎಂದರೆ ಸಾಕ್ಷಿ 14 ರಿಂದ 15 ಕಿ.ಮೀ. ದೂರ ಇದೆ ಎಂದು ನುಡಿಯುತ್ತಾರೆ. ಅಳಗಿ ಗ್ರಾಮದಲ್ಲಿನ ಜಮೀನು ಸ್ವಾಧೀನಪಡಿಸಿಕೊಂಡ ಬಗ್ಗೆ ಸದರಿ ಮಾಲೀಕರು ಸಲ್ಲಿಸಿದ LAC ಅಪೀಲು ನಂ.258/2018ರಲ್ಲಿನ ಜಮೀನು ಫಲವತ್ತಾದ ಮತ್ತು ನೀರಾವರಿ ಜಮೀನಿಗೆ ಆದಂತಹ ತೀರ್ಪು ಆಗಿದ್ದು ನಮ್ಮ ಜಮೀನು ಖುಷ್ಕಿ ಜಮೀನಾಗಿದೆ ಎಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿ ಸ್ವಾ ಧೀನಪಡಿಸಿಕೊಳ್ಳಲಾದ LAC ಅಪೀಲು ನಂ.258/2018ರಲ್ಲಿನ ಜಮೀನು ಫಲವತ್ತಾದ ಮತ್ತು ಒಳ್ಳೆಯ ಜಮೀನು ಆಗಿದ್ದು ನನ್ನ ಜಮೀನು ಖುಷ್ಕಿ ಜಮೀನು ಆಗಿದೆ ಎಂದರೆ ಸರಿಯಲ್ಲ. ನಮ್ಮ ಊರಿನಿಂದ ಕಲ್ಲೂರ ಬಿ ಗ್ರಾಮ 20 ಕಿ.ಮೀ. ದೂರ ಇದೆ ಎಂದರೆ ಸಾಕ್ಷಿ 4 ರಿಂದ 5 ಕಿ.ಮೀ. ದೂರ ಇದೆ ಎಂದು ನುಡಿಯುತ್ತಾರೆ. LAC ಅಪೀಲು ನಂ.388/2017, 389/2017ರಲ್ಲಿನ ಜಮೀನು ಫಲವತ್ತಾದ ಮತ್ತು ಒಳ್ಳೆಯ ಜಮೀನು ಆಗಿದ್ದು ನನ್ನ ಜಮೀನು ಖುಷ್ಕಿ ಜಮೀನು ಆಗಿದೆ ಎಂದರೆ ಸರಿಯಲ್ಲ.

ನನ್ನ ಜಮೀನಿನ ಕಬ್ಜೆಯನ್ನು ಜಮೀನು ಸ್ವಾಧೀನಪಡಿಸಿಕೊಳ್ಳುವ ಪೂರ್ವದಲ್ಲಿ ನನ್ನ ಜಮೀನಿನ ಕಬ್ಜೆ ಪಡೆದುಕೊಳ್ಳಲಾಗಿದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸಿದ್ನಾಳ ಗ್ರಾಮದಲ್ಲಿ ವಾಸವಾಗಿರುತ್ತೇನೆ. ನಾನು ಹಾಜರುಪಡಿಸಿದಂತಹ ದಾಖಲಾತಿಗಳಲ್ಲಿ ನನ್ನ ವಾಸ ಸ್ಥಳ ಗುಲ್ಲಾಳ ಡಿ ಆಗಿದೆ ಎಂದರೆ ಸಾಕ್ಷಿ ನನ್ನ ಜಮೀನು ಗುಲ್ಲಾಳ ಡಿ ಗ್ರಾಮದಲ್ಲಿ ಬರುತ್ತದೆ ಎಂದು ನುಡಿಯುತ್ತಾರೆ.

ಭೂಸ್ವಾಧೀನಾಧಿಕಾರಿಗಳು ಯೋಗ್ಯ ಪರಿಹಾರ ಧನ ನೀಡಿದ್ದರೂ ಸಹ ಹೆಚ್ಚಿ ಗೆ ಪರಿಹಾರ ಧನ ಪಡೆಯುವ ಸಲುವಾಗಿ ಈ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇನೆಂದರೆ ಸರಿಯಲ್ಲ.

**<u>ಪಾಟೀಸವಾಲುಃ ಶ್ರೀ ಎ.ಡಿ.ಜಿ.ಪಿ. 2ನೇ ಎದುರುದಾರರ ಪರ ವಕೀಲರಿಂದ</u>**

ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ವಿಚಾರಗಳು ನನಗೆ ಗೊತ್ತು. ಅವಾರ್ಡ್ ದಾಖಲಾತಿಯಲ್ಲಿ ಭೂಸ್ವಾಧೀನಾಧಿಕಾರಿಗಳು ನಮ್ಮ ಜಮೀನಿಗೆ ಭೇಟಿ ನೀಡಿ ಪರಿಹಾರ ಹಣ ಘೋಷಣೆ ಮಾಡಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಯಾವ ಅಧಿಕಾರಿಯು ನಮ್ಮ ಜಮೀನಿಗೆ ಬಂದಿಲ್ಲ ಎಂದು ನುಡಿಯುತ್ತಾರೆ. ಅವಾರ್ಡಿನಲ್ಲಿ ಭೂಸ್ವಾಧೀನಾಧಿಕಾರಿಗಳು ನಮ್ಮ ಜಮೀನಿಗೆ ಭೇಟಿ ನೀಡಿರುತ್ತಾರೆ ಎಂಬ ವಿಚಾರ ಸುಳ್ಳಿನಿಂದ ಕೂಡಿದೆ ಎಂದರು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಎಲ್ಲಿಯೂ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಸದರಿ ವಿಚಾರವನ್ನು ನಮೂದಿಸಿರುತ್ತೇನೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಸುಮಾರು 30 ವರ್ಷದಿಂದ ಒಕ್ಕಲುತನ ಮಾಡುತ್ತಿದ್ದೇನೆ. ಜಮೀನಿನಲ್ಲಿ ಯಾವ ಬೆಳೆ ಬೆಳೆಯುತ್ತಿದ್ದೇವೆ , ಯಾವ ಗಿಡಗಳಿವೆ ಎಂದು ಗ್ರಾಮ ಲೆಕ್ಕಾಧಿಕಾರಿಗಳಿಗೆ ಅರ್ಜಿ ನೀಡಬೇಕು ಎಂಬ ರೂಢಿ ಇದೆ ಎಂದರೆ ನಿಜ. ನಾವು ಅರ್ಜಿ ನೀಡಿದ ಆಧಾರದಮೇಲೆ ಜಮೀನಿನಲ್ಲಿ ಬೆಳೆಯುವ ಬೆಳೆಗಳ ಬಗ್ಗೆ ಹಾಗೂ ಗಿಡಗಳ ಬಗ್ಗೆ ಗ್ರಾಮ ಲೆಕ್ಕಾಧಿಕಾರಿಗಳು ಪಹಣಿಯಲ್ಲಿ ನಮೂದು ಮಾಡುತ್ತಾರೆಂದರೆ ನಿಜ.

ನಾನು ಹೇಳಿದಂತಹ ಬೆಳೆಗಳು ಜಮೀನಿನಲ್ಲಿ ಬೆಳೆಯುತ್ತಿದ್ದೇನೆ ಎಂದು ಗ್ರಾಮ ಲೆಕ್ಕಾಧಿಕಾರಿಗಳಿಗೆ ಅರ್ಜಿ ನೀಡಿಲ್ಲ ಎಂದರೆ ನಿಜ. ಸಾಕ್ಷಿ ಮುಂದುವರೆದು ಮೌಖಿಕವಾಗಿ ಹೇಳಿದ್ದೆ ಎಂದು ನುಡಿಯುತ್ತಾರೆ. ನಮ್ಮ ಜಮೀನಿನಲ್ಲಿ ಮೇಲೆ ಹೇಳಿದಂತಹ ಬೆಳೆಗಳನ್ನು ನಾನು ಬೆಳೆಯುತ್ತಿರಲಿಲ್ಲ ಎಂದರೆ ಸರಿಯಲ್ಲ. ಹೆಚ್ಚಿ ಗೆ ಪರಿಹಾರ ಪಡೆಯುವ ಉದ್ದೇಶದಿಂದ ಮೇಲೆ ಹೇಳಿದಂತಹ ಎಲ್ಲಾ ಬೆಳೆಗಳನ್ನು ಬರೆಯುತ್ತಿದ್ದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಜಮೀನಿನ ಮಾರುಕಟ್ಟೆಯ ಬೆಲೆ 40 ರಿಂದ 50 ಲಕ್ಷ ಪ್ರತಿ ಎಕರೆಗೆ ಇದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಜಮೀನು ಬೆಲೆ 40 ರಿಂದ 50 ಲಕ್ಷ ಪ್ರತಿ ಎಕರೆ ಬೆಲೆ ಬಾಳುತ್ತಿತ್ತು ಎಂದು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ

ಎಂದರೆ ನಿಜ. ಜಮೀನು ಸ್ವಾಧೀನಪಡಿಸಿಕೊಳ್ಳುವ ಸಮಯದಲ್ಲಿ ಇದ್ದಂತಹ ದರಕ್ಕೆ ಭೂಸ್ವಾಧೀನ ಅಧಿಕಾರಿಗಳು ಸರಿಯಾದ ಪರಿಹಾರ ಧನವನ್ನು ನಿಗದಿಮಾಡಿರುತ್ತಾರೆಂದರೆ ಸರಿಯಲ್ಲ. ಪರಿಹಾರ ಧನವನ್ನು ಹೆಚ್ಚಿಗೆ ಯಾವ ಆಧಾರದ ಮೇಲೆ ಮಾಡಬೇಕು ಎಂದು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ನಿಜ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ನಮೂದಿಸಿದ ವಿಚಾರಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ. ಸರಕಾರದಿಂದ ಹೆಚ್ಚಿ ಗೆ ಪರಿಹಾರ ಧನ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲು ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಕ್ಯಾನಲ್ ನಮ್ಮ ಜಮೀನಿನ ಮಧ್ಯಭಾಗದಿಂದ ಹೋಗಿರುವ ಕಾರಣ ನಮ್ಮ ಜಮೀನು ಎರಡು ತುಂಡುಗಳಾದ ಕಾರಣ ನನಗೆ ಬೆಳೆ ಬೆಳೆಯಲು ಆಗುತ್ತಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಜಮೀನಿನ ಮಧ್ಯಭಾಗದಿಂದ ಕ್ಯಾನಲ್ ಹಾದುಹೋದಕಾರಣ ನನ್ನ ಜಮೀನು ಎರಡು ತುಂಡು ಆಗಿರುವ ಕಾರಣ ಪರಿಹಾರ ಹಣ ಕೊಡಬೇಕು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಜಮೀನಿನಲ್ಲಿ ನನ್ನ ಸಾಕ್ಷಿ ಪ್ರಮಾಣ ಪತ್ರದ ಕಂಡಿಕೆ-9ರಲ್ಲಿ ಸಬ್ ಪ್ಯಾರಾ ನಂ.1 ರಿಂದ 3ರಲ್ಲಿ ನಮೂದಿಸಿದ ವಿಚಾರಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ.

LAC ಪ್ರಕರಣ ನಂ.2, 4 ರಿಂದ 6/2019ರಲ್ಲಿ ಸಲ್ಲಿಸಿದ ಅರ್ಜಿಗಳು ಕಾಲಮಿತಿಯಿಂದ ಬಾದಿತವಾಗಿವೆ ಎಂದೆರ ಸರಿಯಲ್ಲ.

**ಈ ಹಂತದಲ್ಲಿ ಮಾನ್ಯ ಎಡಿಜಿಪಿಯವರು 1ನೇ ಎದುರುದಾರರ ಪರ ವಕೀಲರು ಮಾಡಿದಂತಹ ಪಾಟೀ ಸವಾಲನ್ನು ತಮ್ಮ ಪರವಾಗಿ ಅಳವಡಿಸಿಕೊಳ್ಳಲು ಕೋರಿರುತ್ತಾರೆ.**

**3 ಮತ್ತು 4ನೇ ಎದುರುದಾರರನ್ನು ಹಾಗೂ ಅವರ ಪರ ವಕೀಲರನ್ನು ಕರೆಯಿಸಲಾಗಿ ಗೈರುಹಾಜರಾಗಿದ್ದು ಅವರ ಪರ ಯಾವುದೇ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

ಮರುವಿಚಾರಣೆಃ ಇಲ್ಲಾ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ.

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,ಜೇವರ್ಗಿ